# ಕರುಣಿಸಿ ಕೇಳು ಕಂದನ ಮಾತನು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
4. **Note:** Lyrics mentioned without highlights are as per Ref. 1 and the wordings given in yellow highlights are as per Ref. 2. Lyrics given in green highlights are as per Ref. 3.
5. **Note:** Lyrics followed by the singer are mostly as per Ref. 3. But, there are lot of variations. Ankita in Ref. 3 is "Guru Purandara Vittala" and the singer has also used it.

| | |
|---|---|
| ರಾಗ: ಆನಂದ ಭೈರವಿ ತಾಳ: ಅಟ | ರಾಗ: ಶಂಕರಾಭರಣ ತಾಳ: ಅಟ |
| | |
| ಕರುಣಿಸಿ ಕೇಳೊ ಕಂದನ ಮಾತನು ‖ ಪ ‖ | ಕರುಣಿಸಿ ಕೇಳು ಕಂದನ ಮಾತನು |
| ಗರುಡವಾಹನನೆ ಗಂಗೆಯ ಪೆತ್ತ ಶ್ರೀ ಹರಿಯೆ ‖ ಅಪ ‖ | ಗರುಡವಾಹನ ಗಂಗಾಜನಕ ಶ್ರೀಹರಿಯೇ |
| | |
| ಇತ್ತ ಬಾರೆಂಬರಿಲ್ಲ, ಯಾರು ಕೇಳುವರಿಲ್ಲ | ಇತ್ತ ಬಾ ಎಂಬರಿಲ್ಲ ಇರವ ಕೇಳುವರಿಲ್ಲ |
| ಹತ್ತಿರ ಕುಳ್ಳಿರಿಸಿ ಆದರಿಪರಿಲ್ಲ | ಹತ್ತಿರ ಕುಳ್ಳಿರಿಸಿ ಆದರಿಪರಿಲ್ಲ |
| ತತ್ತರಗೊಳುತೇನೆ ತಾವರೆಲೆ ನೀರಂತೆ | ತತ್ತರ ಪಡುತಿಹೆ ತಾವರೆಲೆಯ ನೀರಂತೆ |
| ಚಿತ್ತ ಭ್ರಮಿಸಿ ಕಣ್ಣು ಕತ್ತಲಾಯಿತು ಹರಿಯೆ ‖ 1 ‖ | ಹತ್ತು ನೂರು ನಾಮವ ಪೊತ್ತ ಶ್ರೀ ಹರಿಯೇ |
| | |
| ಇಂದುಂಬಶನವಿಲ್ಲ, ಇರವ ಕೇಳುವರಿಲ್ಲ | ಇಂದಿಗಶನವಿಲ್ಲ ನಿಂದಿರೆ ನೆರಳಿಲ್ಲ |
| ಒಂದು ಸುತ್ತಿಗೆ ತುಂಡು ಅರಿವೆ ಇಲ್ಲ | ಒಂದೇ ಸುತ್ತಿಗೆ ತುಂಡು ಅರಿವೆಯಿಲ್ಲ |
| ಬೆಂದೊಡಲಿಗೆ ಒಬ್ಬರಯ್ಯೊ ಎಂಬುವರಿಲ್ಲ | ಬೆಂದೊಡಲಿಗೆ ಒಬ್ಬರಯ್ಯೋ ಎಂಬುವರಿಲ್ಲ |
| ಬಿಂದು ಮಾತ್ರದಿ ಸುಖವ ನಾ ಕಾಣೆ ಹರಿಯೆ ‖ 2 ‖ | ಬಿಂದು ಮಾತ್ರದ ಸುಖ ಕಾಣೆ ನಾ ಹರಿಯೇ |
| | |
| ಎಲ್ಲಿದ್ದರೆನಗೊಂದು ನೆಲೆಯಿಲ್ಲ ಶ್ರೀಹರಿ | ಎಲ್ಲಿದ್ದರೆನಗೊಂದು ನೆಲೆಯಿಲ್ಲ ಶ್ರೀಹರಿ |
| ಅಲ್ಲವ ತಿಂದಿಲಿಯಂತೆ ಬಳಲುವೆನೆ | ಅಲ್ಲ ತಿಂದಿಲಿಯಂತೆ ಬಳಲುವೆನೊ |
| ಫುಲ್ಲಲೋಚನ ಪೂರ್ಣ ದಯದಿ ಸಲಹೊ ಎನ್ನ | ಫುಲ್ಲಲೋಚನ ಪೂರ್ಣ ದಯದಿ ಸಲಹೊ ಎನ್ನ |
| ಸಲ್ಲದ ನಾಣ್ಯವ ಮಾಡಿ ಬಿಡುವರೆ ಹರಿಯೆ ‖ 3 ‖ | ಸಲ್ಲದ ನಾಣ್ಯವ ಮಾಡುವರೆ ಹರಿಯೇ |
| | |
| ನಖ ಕೇಶ ಪರಿಯಂತ ನಾನಾ ಭವದಿ ನೊಂದೆ | ನಖ-ಶಿಖ ಪರ್ಯಂತ ನಾನಾ ಹಿಂಸೆಯ ಪಟ್ಟೆ |

| | |
|---|---|
| ಸುಖವ ಕಾಣೆನು ಬಿಂದು ಮಾತ್ರದಲಿ | ಸುಖವೆಂಬುದನು ಕಾಣೆ ಸ್ವಪ್ನದಲು |
| ಮುಖವರಿಯದ ರಾಜ್ಯದೊಳಗೆ ಎನ್ನನು ಬಿಟ್ಟು | ಮುಖವರಿಯದ ರಾಜ್ಯಕ್ಕೆನ್ನನು ಎಳತಂದು |
| ಬಕನಂತೆ ಮಾಳ್ಪುದುಚಿತವೇ ಶ್ರೀಹರಿಯೆ \|\| 4 \|\| | ಕಕಮಕ ಮಾಡುವುದು ಚಿತವೆ ಹರಿಯೇ |
| | |
| ಇಷ್ಟು ದಿವಸ ನಿನ್ನ ನೆನೆಯದ ಕಾರಣ | ಇಷ್ಟು ದಿವಸ ನಿನ್ನ ನೆನೆಯದ ಕಾರಣ |
| ಕಷ್ಟಪಟ್ಟೆನು ಸ್ವಾಮಿ ಕಾಯೊ ಎನ್ನ | ಕಷ್ಟ ಪಟ್ಟೆನು ಸ್ವಾಮಿ ಕಾಯೊ ಎನ್ನ |
| ಮುಟ್ಟಿ ಭಜಿಸಲಿಲ್ಲ ಮುರವೈರಿ ನೀ ದಯ- | ಮುಟ್ಟಿ ಭಜಿಸಲಿಲ್ಲ ಮುರವೈರಿ ನೀ ದಯ- |
| ವಿಟ್ಟು ಸಲಹೊ ಶ್ರೀ ಪುರಂದರ ವಿಠಲ \|\| 5 \|\| | ವಿಟ್ಟು ಸಲಹೊ ಶ್ರೀ ಪುರಂದರ ವಿಠಲ |

**Note:** Below given lyrics given in green highlights are as per Ref. 3 cited above.

ರಾಗ: ಶಂಕರಾಭರಣ ತಾಳ: ಅಟ

ಕರುಣಿಸಿ ಕೇಳು ಕಂದನ ಮಾತನು
ಗರುಡವಾಹನನೆ ಗಂಗೆಯ ಪೆತ್ತ ಹರಿಯೆ || ಪ ||

ಇತ್ತ ಬಾರೆಂಬರಿಲ್ಲ ಇರವು ಕೇಳುವರಿಲ್ಲ
ಹತ್ತಿರ ಕುಳ್ಳಿರಿಸಿ ಆದರಿಪರಿಲ್ಲ
ತತ್ತರ ಪಡುತ್ತೇನೆ ತಾವರೆ ಜಲದಂತೆ
ಚಿತ್ತ ಭ್ರಮಿಸಿ ಕಣ್ಣು ಕತ್ತಲಾಯಿತು ಹರಿಯೆ || ೧ ||

ಇಂದಿಗಶನವಿಲ್ಲ ನಿಂದಿರೆ ನೆರಳಿಲ್ಲ
ಒಂದು ಸುತ್ತಿಗೆ ತುಂಡು ಅರಿವೆ ಇಲ್ಲ
ಬಿಂದು ಮಾತ್ರ ಮಂಡೆಗೆ ಎಣ್ಣೆ ಮೊದಲಿಲ್ಲ
ಬಂದೆಯಾ ಎಂಬುವರಿಲ್ಲ ಭವಣಿ ಕೇಳು ಹರಿಯೇ || ೨ ||

ಎಳ್ಳು ಕಾಳಷ್ಟಾದರೆನಗಾಶ್ರಯವಿಲ್ಲ
ಅಲ್ಲವ ತಿಂದಿಲಿಯಂತೆ ಕೊರಗಿ
ಗಲ್ಲ ತಿವಿಸಿಕೊಂಡು ಗಾರು ಪಟ್ಟೆನು ಇಂಥ
ಸಲ್ಲದ ನಾಣ್ಯವ ಮಾಡುವರೆ ಹರಿಯೆ || ೩ ||

ನಖ-ಶಿಖ ಪರ್ಯಂತ ನಾನಾ ಹಿಂಸೆಯ ಪಟ್ಟೆ
ಸುಖವೆಂಬುದು ಕಾಣೆ ಸ್ವಪ್ನದಲು
ಮುಖವನರಿಯದ ರಾಜ್ಯಕ್ಕೆನ್ನ ಎಳತಂದು
ಕಕಮಕ ಮಾಡುವುದುಚಿತವೆ ಹರಿಯೆ || ೪ ||

ಇಷ್ಟು ದಿವಸ ನಿಮ್ಮ ಇರವ ನಾನರಿಯದೆ
ಮುಟ್ಟಿ ಪೂಜಿಸಲಿಲ್ಲ ಮುರವೈರಿಯೆ
ಕಷ್ಟವ ಪಡಿಸದೆ ಕರುಣಿಸಿ ನಿನ್ನ ಸೇವೆ
ಕೊಟ್ಟು ರಕ್ಷಿಸು ಗುರು ಪುರಂದರ ವಿಠಲ || ೫ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಗಂಗೆಯ ಪೆತ್ತ –** ತ್ರಿವಿಕ್ರಮಾವತಾರದಲ್ಲಿ.

**ಇರವು ಕೇಳುವರಿಲ್ಲ –** ಹೇಗಿರುವೆಯೆಂದು ವಿಚಾರಿಸುವವರಿಲ್ಲ.

**ಭವಣೆ –** ಬವಣೆ.

**ಅಲ್ಲವ ತಿಂದಿಲಿಯಂತೆ… –** ಬೋನಿನೊಳಗೆ ಅಲ್ಲ (ಶುಂಠಿ) ಮೊದಲಾದ ವಾಸನೆಯ ಪದಾರ್ಥಗಳನ್ನು ಇರಿಸಿ ಇಲಿಗಳನ್ನು ಆಕರ್ಷಿಸಿ ಹಿಡಿಯುತ್ತಾರೆ. ಹಿಡಿದ ಮೇಲೆ ತಿವಿದು ತಿವಿದು ಗಾರುಪಡಿಸುತ್ತಾರೆ. ಜೀವದ ಸ್ಥಿತಿಯೂ ಅದೇ.

**ಸಲ್ಲದ ನಾಣ್ಯವ ಮಾಡುವರೆ –** ಚಲಾವಣೆಯಲ್ಲಿರುವ ತನಕ ನಾಣ್ಯಕ್ಕೆ ಬೆಲೆ. ಅದನ್ನು ಚೆನ್ನಾಗಿ ಸವೆಸಿ ಹಾಕಿದರೆ ಯಾರೂ ಕೊಳ್ಳುವುದಿಲ್ಲ. ಹಾಗೆಯೇ ವ್ಯಕ್ತಿ ಸಮಾಜದಲ್ಲಿ ಅನಾಥ ಪ್ರಜ್ಞೆಯಿಂದ ನರಳಿ ಘನತೆ ಕಳೆದುಕೊಳ್ಳುತ್ತಾನೆ.

**ಗಂಗಾ ಜನಕ** = ಶ್ರೀ ಹರಿ (ಗಂಗೆಯ ಉಂಗುಟದಿ ಪಡೆದವ)

**ಹತ್ತು ನೂರು** = ಸಾವಿರ

**ಅಯ್ಯೋ ಅನ್ನು** = ಮರುಗು

**ಸಲ್ಲದ ನಾಣ್ಯ** = ನಡೆಯದ ನಾಣ

**ನಖ-ಶಿಖಾ ಪರ್ಯಂತ** = ಪೂರ್ಣವಾಗಿ

**ಮುಖವರಿಯದ** = ಗುರುತಿಲ್ಲದ

**ಕಕಮಕ ಮಾಡು** = ದಿಕ್ಕು ತಪ್ಪಿಸು, ಕಂಗೆಡಿಸು

**ಮುಟ್ಟಿ** = ಮನ ಮುಟ್ಟಿ

**Classification:** Keerthane
**Ankita:** sri purandara vittala
**Location:** NA
**Category:** samsara chitranagalu, jeevana darshana

**Sub-Category:** karuna, koosu, garuda, gange, Krishna, padma, kannu, sukha, purna, ili, daya, rokka, bhava, rajya, bhajane, shatru, niru, kanasu, puje,

**Pravachana:** NA

**Explanation:** NA